ಯಾದಗಿರಿಯಲ್ಲಿ 400 ಹಾಸಿಗೆಗಳ ಆಸ್ಪತ್ರೆ
15 (11)

ಡಾ ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ಯಾದಗಿರಿಯಲ್ಲಿ 400 ಹಾಸಿಗೆಗಳ ಆಸ್ಪತ್ರೆ ಪ್ರಾರಂಭಿಸುವ ಕುರಿತು ಅಶೋಕ ನಗರದಲ್ಲಿ 30 ಎಕರೆ 12 ಗುಂಟೆ ಜಮೀನು ಸ್ವಾಧೀನ ಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆಗೆ ಸರ್ಕಾರ ಅನುಮತಿ ನೀಡಿ ಅನುದಾನ ಬಿಡುಗಡೆ ಮಾಡಿದೆಯೇ? (ವಿವರ ನೀಡುವುದು), ಇಲ್ಲದಿದ್ದಲ್ಲಿ, ಈ ಪ್ರಸ್ತಾವನೆಯು ಸದ್ಯ ಯಾವ ಹಂತದಲ್ಲಿದೆ?

ಇ) ಯಾದಗಿರಿಯಲ್ಲಿ ಸಾರ್ವಜನಿಕ ಆಸ್ಪತ್ರೆ ಮೇಲ್ದರ್ಜೆಗೇರಿಸಿ ರೋಗಿಗಳಿಗೆ ಉತ್ತಮ ಆರೋಗ್ಯ ರಕ್ಷಣೆ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಯಾದಗಿರಿ ಜಿಲ್ಲೆಯಾಗಿ ನಾಲ್ಕು ವರ್ಷಗಳಾದರೂ ಸದರಿ ಆಸ್ಪತ್ರೆ ತಾಲ್ಲೂಕು ಮಟ್ಟದಲ್ಲೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ–ಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸದರಿ ಆಸ್ಪತ್ರೆಯನ್ನು 250 ಹಾಸಿಗೆಗಳ. ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈ ಪ್ರಸ್ತಾವನೆಯನ್ನು ಎನ್.ಆರ್.ಹೆಚ್.ಎಂ. ಯೋಜನೆಯಡಿ ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ. ಹಾಗೂ 2012–13ನೇ ಸಾಲಿನ ಕ್ರಿಯಾಯೋಜನೆಯಲ್ಲಿ ರೂ 3.00 ಕೋಟಿಗಳ ಅನುದಾನವನ್ನು ಎನ್.–ಆರ್.ಹೆಚ್.ಎಂ. ಅಡಿಯಲ್ಲಿ ಕಾಯ್ದಿರಿಸಲಾಗಿದೆ.

ಇ) ಯಾದಗಿರಿ ಜಿಲ್ಲಾ ಕೇಂದ್ರದಲ್ಲಿ 100 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಆಸ್ಪತ್ರೆಯ ಕಳೆದ 3 ವರ್ಷಗಳ ಹಾಸಿಗೆಗಳ ಬಳಕೆ ದರವು ಶೇ. 50.00, 47.24, 63.91

ಆಗಿರುತ್ತದೆ. 100 ಹಾಸಿಗೆಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಅಗತ್ಯ ಹುದ್ದೆಗಳು ಮಂಜೂರಾಗಿದ್ದು, ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಆಸ್ಪತ್ರೆಯನ್ನು 250 ಹಾಸಿಗೆಗಳ ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸುವ ಸಂಬಂಧ ಯಾದಗಿರಿ–ಬಿ ಗ್ರಾಮದ ಸರ್ವೆ ನಂಬರ್ 382, 399,400,401 ಮತ್ತು 402 ರ ಒಟ್ಟಾರೆ 20 ಎಕರೆ 31 ಗುಂಟೆ ವಿಸ್ತೀರ್ಣವುಳ್ಳ ನಿವೇಶನವನ್ನು ಗುರುತಿಸಲಾಗಿರುತ್ತದೆ. ಹಾಗೂ ಸದರಿ ನಿವೇಶನವನ್ನು ಭೂ–ಸ್ವಾಧೀನ ಕಾಯ್ದೆಯನ್ವಯ ವಶಪಡಿಸಿಕೊಂಡು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಶಕ್ಕೆ ನೀಡುವ ಪ್ರಕ್ರಿಯೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕಂದಾಯ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈ ಆಸ್ಪತ್ರೆಯಲ್ಲಿ ಹೊರ ರೋಗಿಗಳ ಸೇವೆ, ಒಳರೋಗಿಗಳ ಸೇವೆ, ಪ್ರಸೂತಿ ಸೇವೆ, ಮಕ್ಕಳ ಸೇವೆಗಳು, ಶಸ್ತ್ರಚಿಕಿತ್ಸೆ, ಸಾಮಾನ್ಯ ವೈದ್ಯಕೀಯ 24x7 ಸೇವೆಗಳು, ಕ್ಷ–ಕಿರಣ ತಂತ್ರಜ್ಞಾ ಸೌಲಭ್ಯ, ಟೆಲಿಮೆಡಿಷನ್ ಸೌಲಭ್ಯಗಳ ಲಭ್ಯವಿದೆ.

ಈ) ಸರ್ಕಾರದ ಗಮನಕ್ಕೆ ಬಂದಿದೆ. ಯಾದಗಿರಿಯ ತಾಲ್ಲೂಕು ಮಟ್ಟದ ಆಸ್ಪತ್ರೆಯನ್ನು ಜಿಲ್ಲಾ ಮಟ್ಟದ ಆಸ್ಪತ್ರೆಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಡಾ: ಎ.ಬಿ. ಮಾಲಕರೆಡ್ಡಿ:- ನನ್ನ ಪ್ರಶ್ನೆಯ ಮೂಲ ಆಶಯವೇನೆಂದರೆ, ಯಾದಗಿರಿ ಜಿಲ್ಲಾ ಕೇಂದ್ರವಾಗಿ ಉನ್ನತೀಕರಣವಾಗಿ ಮೂರು ವರ್ಷಗಳ ಮೇಲಾಯಿತು. ಸರ್ಕಾರದ ಉತ್ತರವನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಇವರು ಕುಂಭಕರ್ಣನ ಎರಡನೇ ಅವತಾರವೆಂದು ಹೇಳಬೇಕಾಗುತ್ತದೆ. ಇವರು ಆ ಮೂಡ್‌ನಲ್ಲಿದ್ದಾರೆ. ನಾನು ಕೇಳಿರುವ ನಾಲ್ಕನೆಯ ಪ್ರಶ್ನೆ ಏನೆಂದರೆ, ಯಾದಗಿರಿ ಜಿಲ್ಲೆಯಾಗಿ ನಾಲ್ಕು ವರ್ಷಗಳಾದರೂ ಸದರಿ ಆಸ್ಪತ್ರೆ ತಾಲ್ಲೂಕು ಮಟ್ಟದಲ್ಲೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? ಎಂದು ಕೇಳಿದ್ದೇವೆ. ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. It has come to their notice. They have forgotten that they have issued the gazette. ಯಾದಗಿರಿಯ ತಾಲ್ಲೂಕು ಮಟ್ಟದ ಆಸ್ಪತ್ರೆಯನ್ನು ಜಿಲ್ಲಾ ಮಟ್ಟದ ಆಸ್ಪತ್ರೆಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ

ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ನೀವು ಪರಿಶೀಲನೆ ಮಾಡಿಕೊಳ್ಳುತ್ತಾ ಕುಳಿತರೆ ಅಲ್ಲಿ ಜನರು wait ಮಾಡುತ್ತಾರೇನು? ಈಗ floating population ಹೆಚ್ಚಾಗಿದೆ. ಮೊದಲು ಯಾದಗಿರಿಯಲ್ಲಿ ಎರಡು Boarding and Lodging ಇದ್ದವು. ಈಗ ಎಂಟು Boarding and Lodgings ಆಗಿವೆ. ಆದರೆ ಇದರ ಅರ್ಥ floating population ಹೆಚ್ಚಾಗಿದೆ. ಯಾದಗಿರಿ ಜಿಲ್ಲಾ ಕೇಂದ್ರವಾದ ಮೇಲೆ ಜನರ ಆಶೋತ್ತರಗಳು ಹೆಚ್ಚಾಗಿವೆ, ನಿರೀಕ್ಷೆ ಹೆಚ್ಚಾಗಿದೆ. ಯಾದಗಿರಿ ಜಿಲ್ಲಾ ಕೇಂದ್ರವಾದ ಮೇಲೆ ಅಲ್ಲಿನ ತಾಲ್ಲೂಕು ಮಟ್ಟದ ಆಸ್ಪತ್ರೆ ಜಿಲ್ಲಾ ಆಸ್ಪತ್ರೆಯಾ ಗುತ್ತದೆ, ಅಲ್ಲಿ ಹೆಚ್ಚಿನ ಚಿಕಿತ್ಸೆ ಸಿಗಬಹುದು ಎಂದು ತಿಳಿದುಕೊಂಡು ಜನರು ಅಲ್ಲಿಗೆ ಬಂದರೆ ಅಲ್ಲಿ ಒಂದು ಸೌಲಭ್ಯವೂ ಇಲ್ಲ. ಈಗಾಗಲೇ ನಾಡಗೌಡರು ಹೇಳಿದ ಹಾಗೆ, ಇದೂ ಕೂಡ ತಾಲ್ಲೂಕು ಮಟ್ಟದ ಆಸ್ಪತ್ರೆಯಾಗಿದ್ದು, ಬೇರೆ ತಾಲ್ಲೂಕುಗಳಲ್ಲಿ ಯಾವ ರೀತಿಯಾದ ಅಸಮಪರ್ಕವಾದ ವ್ಯವಸ್ಥೆಯಿದೆ, ಹಾಗೆಯೇ ಇಲ್ಲೂ ಕೂಡ ಅಸಮಪರ್ಕವಾದ ವ್ಯವಸ್ಥೆಯೇ ಇದೆ. ಜಿಲ್ಲಾ ಆಸ್ಪತ್ರೆ ಎನ್ನುವುದು ಪರಿಶೀಲನೆಯಲ್ಲಿಯೇ ಇದೆ. ಇದನ್ನು ೨೫೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಕೆಲವು ಸರ್ವೆ ನಂಬರನ್ನು ಅಕ್ವೈರ್ ಮಾಡಿಕೊಳ್ಳುತ್ತಾರೆ ಎನ್ನುವುದನ್ನು ಕೇಳಿದ್ದೇವೆ. ಆ ಜಮೀನಿಗೆ ೫ ಜನ ಭೂಮಾಲೀಕರಿದ್ದಾರೆ. ಯಾದಗಿರಿ ಹೊಸ ಜಿಲ್ಲೆಯಾಗಿ ಪರಿವರ್ತನೆಯಾದ ಮೇಲೆ ಅಲ್ಲಿ ಜಮೀನಿಗೆ ಸಾಕಷ್ಟು ಡಿಮ್ಯಾಂಡ್ ಇದೆ. ಈ ಬಗ್ಗೆ ನಾನು ಮೊದಲನೇ ಪ್ರಶ್ನೆಯಲ್ಲೇ ಕೇಳಿದ್ದೆ. ಒಬ್ಬನೇ ಭೂ ಮಾಲೀಕರಾಗಿರುವ ೩೦ ಎಕರೆ ಭೂಮಿ ಒಂದೇ ಕಡೆ ಇದೆ. ಅಲ್ಲಿ ನೀವು ಪ್ರಾರಂಭ ಮಾಡಿದರೆ ಸರ್ಕಾರದ ಉದ್ದೇಶವೂ ಈಡೇರುತ್ತದೆ. ಏಕೆಂದರೆ, ಯಾವ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜುಗಳಿಲ್ಲ, ಅದರಲ್ಲೂ ಹಿಂದುಳಿದ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜುಗಳನ್ನು ಮಾಡಬೇಕು ಎನ್ನುವ ಪ್ರಸ್ತಾವನೆ ಸರ್ಕಾರದ ವಿಚಾರದಲ್ಲಿದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಈ ೩೦ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದೇ ಸ್ಥಳದಲ್ಲಿ ೨೫೦ ಹಾಸಿಗೆಗಳ ಆಸ್ಪತ್ರೆಯನ್ನು ಕಟ್ಟಿದರೆ ಮುಂದೆ ಅದನ್ನು

ಮೇಲ್ದರ್ಜೆಗೇರಿಸಲು ಕೂಡ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ ಎನ್ನುವುದನ್ನು ದಯಮಾಡಿ ಹೇಳಬೇಕು.

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ಸಭಾಧ್ಯಕ್ಷರೆ, ಹಿಂದಿನ ಆರೋಗ್ಯ ಸಚಿವರಾದಂಥ ಡಾ: ಮಾಲಕರೆಡ್ಡಿಯವರಿಗೆ ಈ ವಿಷಯದ ಬಗ್ಗೆ ಸಾಕಷ್ಟು ಗೊತ್ತಿದೆ. ಕಳೆದ ಸದನದಲ್ಲಿ ನಾನು ಅವರ ಹತ್ತಿರ ವೈಯಕ್ತಿಕವಾಗಿ ಕೂಡ ಮಾತನಾಡಿದ್ದೇನೆ. ಅಲ್ಲಿ land issue problem ಆಗುತ್ತಿದೆ. ೩೦ ಎಕರೆ ಒಂದೇ ಕಡೆ ಇದೆ ಎಂದು ತಾವೇನು ಈಗ ಸಲಹೆ ಕೊಟ್ಟಿದ್ದೀರಿ, ನಿಶ್ಚಿತವಾಗಿ ನಾನು ಅದನ್ನು ಪರಿಗಣಿಸುತ್ತೇನೆ. ಈಗಾಗಲೇ ೨೦ ಎಕರೆಯನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಮಾನ್ಯ ಕಂದಾಯ ಸಚಿವರು ಕರೆದಂಥ ಸಭೆಯಲ್ಲಿ ನಾನು ಕೇಳಿದ್ದೇನೆ. ನಾವು ಮಾಡುವುದು ಒಟ್ಟು ೩ ಜಿಲ್ಲಾ ಆಸ್ಪತ್ರೆಗಳು ಬಾಕಿ ಇವೆ. ಒಂದು ಚಿಕ್ಕಬಳ್ಳಾಪುರದ್ದು, ಅಲ್ಲಿ ಈಗಾಗಲೇ ಲ್ಯಾಂಡ್ ನಮ್ಮ ಕೈಗೆ ಬಂದಿದೆ, ಅಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡುತ್ತಿದ್ದೇವೆ. ಇನ್ನೊಂದು, ರಾಮನಗರದಲ್ಲಿ ಲ್ಯಾಂಡ್ ನಮ್ಮ ಕೈಗೆ ಬರುವ ಕೊನೆಯ ಹಂತದಲ್ಲಿದೆ. ಅಲ್ಲೂ ಕೂಡ ಕಾಮಗಾರಿಯನ್ನು ಶುರು ಮಾಡುತ್ತೇವೆ. ನಿಧಾನವಾಗುತ್ತಿರುವುದು ಯಾದಗಿರಿ ಜಿಲ್ಲೆಯದು ಮಾತ್ರ. ಅದಕ್ಕೆ ತಮ್ಮ ಸಹಕಾರ ಬಹಳ ಮುಖ್ಯ.

ಡಾ:ಎ.ಬಿ. ಮಾಲಕರೆಡ್ಡಿ:- ಸರ್ಕಾರ ಅಲ್ಲಿ ಪ್ರಯತ್ನವನ್ನೇ ಮಾಡಿಲ್ಲ. ನಮ್ಮನ್ನು ಸಮಾಧಾನ ಮಾಡಲು ಸುಮ್ಮನೆ ಉತ್ತರವನ್ನು ಕೊಡುತ್ತಿದ್ದಾರೆ. ಆದರೆ ಅಲ್ಲಿ ನೀವು ಒಂದು ಇಂಚು ಕೂಡ ಪ್ರಯತ್ನ ಮಾಡಿಲ್ಲ, ಒಂದು ಪರ್ಸೆಂಟ್ ಕೂಡ ಪ್ರಯತ್ನ ಮಾಡಿಲ್ಲ. ೩ ವರ್ಷವಾಯಿತು. ಇನ್ನೂ preliminary steps ಕೂಡ initiate ಮಾಡಿಲ್ಲ. ಯಾದಗಿರಿ ಜಿಲ್ಲಾ ಕೇಂದ್ರವಾಗಿದೆ ಎನ್ನುವುದನ್ನೇ ಅವರು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾರೆ.

ಅಧ್ಯಕ್ಷರು:- ಅವರು ಉತ್ತರ ಹೇಳಲಿ. ಆಮೇಲೆ ನೀವು ಕೇಳಿ.

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ಮಾಲಕರೆಡ್ಡಿಯವರ ಗಮನದಲ್ಲಿದೆ, ಈಗಿರುವ ೧೦೦ ಹಾಸಿಗೆಗಳ ತಾಲ್ಲೂಕು ಆಸ್ಪತ್ರೆಯನ್ನೇ ಜಿಲ್ಲಾ ಆಸ್ಪತ್ರೆಯನ್ನಾಗಿ ಮಾಡಬೇಕೆಂಬ ಬೇಡಿಕೆಯೂ ಹಿಂದೆ ಬಂದಿತ್ತು. ಆ ಪ್ರಯತ್ನವನ್ನೂ ನಮ್ಮ ಇಲಾಖೆಯಿಂದ ಮಾಡಿದ್ದೇವೆ. ಅಲ್ಲಿರುವಂಥ ಬೇರೆ ಸರ್ಕಾರಿ ಕಟ್ಟಡಕ್ಕೆ ಸ್ಥಳಾಂತರ ಮಾಡಿದ ಮೇಲೆ ಮಾಡಿ ಎನ್ನುವಂಥ ಸಲಹೆ

ಬಂದಿದ್ದರಿಂದ ಅದನ್ನು ಕೈಬಿಟ್ಟೆವು. ಈಗ ನಮಗೆ ೨೦ ಎಕರೆ ಜಾಗ ಬೇರೆ ಕಡೆ ಸಿಗುತ್ತಿದೆ. ಅದೂ ಬೇಡ, ೩೦ ಎಕರೆ ಜಾಗ ಒಂದೇ ಕಡೆ ಸಿಗುತ್ತದೆ ಎನ್ನುವ ಸಲಹೆಯನ್ನು ಅವರು ಕೊಡುತ್ತಿದ್ದಾರೆ. ಯಾವುದು ಬೇಗ ಆಗುತ್ತದೋ ಅದನ್ನು ಮಾಡಲು ನಾನು ಸಿದ್ಧನಿದ್ದೇನೆ. ಇದಕ್ಕಾಗಿ ಮೂರು ಕೋಟಿ ರೂಪಾಯಿಗಳ ಅನುದಾನವನ್ನೂ ಎತ್ತಿಟ್ಟಿದ್ದೇವೆ. ಹೀಗಾಗಿ ನಮ್ಮ ಕಡೆಯಿಂದ ನಿಧಾನವಾಗುವ ಪ್ರಶ್ನೆಯಿಲ್ಲ. ಅದು ೨೦ ಎಕರೆಯದು ಆಗಲೀ ಅಥವಾ ೩೦ ಎಕರೆಯದು ಆಗಲೀ, ಯಾವ ಜಾಗ ನಮಗೆ ಬೇಗ ಸಿಗುತ್ತದೋ ಆ ಜಾಗದಲ್ಲಿ ನಾವು ಕಟ್ಟಡವನ್ನು ಕಟ್ಟಿ, ಆ ಆಸ್ಪತ್ರೆಯನ್ನು ೨೫೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮಾಡಲು ಸಿದ್ಧನಿದ್ದೇನೆ ಎನ್ನುವ ಉತ್ತರವನ್ನು ತಮ್ಮ ಮುಖಾಂತರ ಕೊಡುತ್ತಿದ್ದೇನೆ.

ಡಾ: ಎ.ಬಿ. ಮಾಲಕರೆಡ್ಡಿ:- ನಾನು ಒಂದು ವಿನಂತಿ ಮಾಡುತ್ತೇನೆ. ಅವರು ಕೆಲವು ದಿವಸಗಳಲ್ಲಿ ಯಾದಗಿರಿ ಆಸ್ಪತ್ರೆಗೆ ಭೇಟಿ ಕೊಡುತ್ತೀರೋ, ಇಲ್ಲವೋ? ತಕ್ಷಣ ತಾವು ಅಲ್ಲಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿದರೆ ಅಲ್ಲಿನ ಪರಿಸ್ಥಿತಿ ಏನಿದೆ ಎಂಬುದು ತಮಗೆ ಗೊತ್ತಾಗುತ್ತದೆ. ಜಿಲ್ಲಾ ಆಸ್ಪತ್ರೆ ಎಂದು ಹೇಳುತ್ತೀರಿ, ಅಲ್ಲಿ Gynaecologist ಇಲ್ಲ. Medical Specialist ಇಲ್ಲ, ENT Surgeon ಇದ್ದಾರೆ, Tonsil extract ಮಾಡಲಿಕ್ಕೆ ಇಲ್ಲಿ ಅನುಕೂಲತೆಗಳು ಇಲ್ಲ. ಒಂದೂ ತಾಲ್ಲೂಕು ಮಟ್ಟದ ಸೇವೆ ಕೂಡ ಅಲ್ಲಿ ಜನರಿಗೆ ಲಭ್ಯವಿಲ್ಲ. ಅಲ್ಲಿ ಬಹಳ ಗಂಭೀರ ಪರಿಸ್ಥಿತಿ ಇದೆ. ತಾವು ಈ ತಿಂಗಳ ಕೊನೆಯ ಒಳಗೆ ತಾವು ಒಂದು ಸಲ ಅಲ್ಲಿಗೆ ಭೇಟಿ ಕೊಟ್ಟರೆ ದೊಡ್ಡ ಉಪಕಾರವಾಗುತ್ತದೆ.

ಶ್ರೀ ಅರವಿಂದ ಲಿಂಬಾವಳಿ:- ಮಾನ್ಯ ಹಿರಿಯ ಸದಸ್ಯರು ಸಲಹೆ ಕೊಟ್ಟ ಹಾಗೆ ಸ್ಥಳ ಪರಿಶೀಲನೆಗೆ ನಿಶ್ಚಿತವಾಗಿ ಬರುತ್ತೇನೆ.